# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 520 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12.12.2024 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖೆಯವತಿಯಿಂದ ಸಿಎಲ್-7 ಪರವಾನಗಿಯನ್ನು ಪಡೆಯಲು ಇರುವ ನಿಯಮಗಳೇನು; ಕಳೆದ 10 ವರ್ಷದಲ್ಲಿ ಎಷ್ಟು ಬಾರಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ; ರಾಜ್ಯಾದ್ಯಂತ ಪ್ರಮಾಸೋದ್ಯಮದ ಹೆಸರಿನಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಮದ್ಯ ಮಾರಾಟಕ್ಕೆ ಅನುಮತಿ ನೀಡಲಾಗುತ್ತಿದೆಯೇ; ಹಾಗೂ ಈ ಹೆಸರಿನಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಸರ್ಕಾರ ಗಮನಹರಿಸಿದೆಯೇ; | ರಾಜ್ಯದಲ್ಲಿ ಸಿಎಲ್-7 ಪರವಾನಗಿಗಳನ್ನು ನೀಡುವಾಗ ಕೆಳಕಂಡ ನಿಯಮಗಳನ್ನು ಪಾಲಿಸಿ ನೀಡಲಾಗುತ್ತಿದೆ.<br><br>**ಸಿಎಲ್-7 ಸನ್ನದಿಗೆ ಸಂಬಂಧಿಸಿದಂತೆ–**ಸಿಎಲ್-7 ಸನ್ನದನ್ನು ಮಂಜೂರು ಮಾಡಲು ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ:<br><br>ಸಿಎಲ್-7 (ಬೋರ್ಡಿಂಗ್ & ಲಾಡ್ಜಿಂಗ್ ಸನ್ನದು) ಸನ್ನದನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3(7) ಮತ್ತು 5 ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಹೊಸದಾಗಿ ಸಿಎಲ್-7 ಸನ್ನದು ಮಂಜೂರು ಮಾಡಲಾಗುತ್ತಿದೆ. ಸಿಎಲ್-7 ಸನ್ನದುಗಳಲ್ಲಿ ಲಾಡ್ಜ್‌ನಲ್ಲಿ ತಂಗುವ ಗ್ರಾಹಕರಿಗೆ ಹಾಗೂ ಅವರ ಅಥಿತಿಗಳಿಗೆ ಹಾಗೂ ರೆಸ್ಟೋರೆಂಟ್‌ಗೆ ಬರುವ ಸಾಂದರ್ಭಿಕ ಸಂದರ್ಶಕರುಗಳಿಗೆ ಮದ್ಯವನ್ನು ಮಾರಾಟ ಮಾಡಲು ಅವಕಾಶವಿರುತ್ತದೆ.<br><br>ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ-8, 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು ಹಾಗೂ ಪತ್ರಾಂಕಿತ ಅಧಿಕಾರಿಗಳ ಕೇಂದ್ರ/ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ |

| | | |
|---|---|---|
| | | ಸಿವಿಲ್ ಅಪೀಲು ಸಂಖ್ಯೆ:12164-12166/2016ರ ದಿನಾಂಕ:31-03-2017ರಲ್ಲಿ ಆದೇಶಿಸಿದಂತೆ 20,000 ಮತ್ತು 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದುಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದುಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ:10243/2017ರಲ್ಲಿನ ದಿನಾಂಕ:11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದುಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.<br><br>ದಿನಾಂಕ:16-08-2024ರ ಅಧಿಸೂಚನೆ ಸಂಖ್ಯೆ:ಆಇ/09/ಪಿಇಎಸ್/2022ರನ್ವಯ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ಉಪ ನಿಯಮ(1)ರಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ |

| | | |
|---|---|---|
| | | ದಿನಾಂಕ:05-02-2018ರ ಅಧಿಸೂಚನೆ ಸಂಖ್ಯೆ:ಎಫ್‌ಡಿ/ 16/ಪಿಇಎಸ್/2017ರನ್ವಯ ಸಿಎಲ್-7 ಸನ್ನದು (ಹೊಟೇಲ್ ಮತ್ತು ಬೋರ್ಡಿಂಗ್ ಹೌಸ್ ಸನ್ನದು) ಹೊಂದಲು ಮಹಾನಗರ ಪಾಲಿಕೆ ಪ್ರದೇಶಕ್ಕೆ 30 ಜೋಡಿ ಹಾಸಿಗೆ ಕೊಠಡಿಗಳು ಮತ್ತು ಇತರೆ ಪ್ರದೇಶಗಳಿಗೆ 20 ಜೋಡಿ ಹಾಸಿಗೆ ಕೊಠಡಿಗಳ ಮಿತಿಯನ್ನು ಸಡಿಲಿಸಿ, ಮಹಾನಗರ ಪಾಲಿಕೆ ಪ್ರದೇಶಕ್ಕೆ 15 ಜೋಡಿ ಹಾಸಿಗೆ ಕೊಠಡಿಗಳು ಮತ್ತು ಇತರೆ ಪ್ರದೇಶಗಳಿಗೆ 10 ಜೋಡಿ ಹಾಸಿಗೆ ಕೊಠಡಿಗಳ ಮಿತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.<br><br>ಕಳೆದ 10 ವರ್ಷಗಳಲ್ಲಿ 01 ತಿದ್ದುಪಡಿ ಮಾಡಲಾಗಿರುತ್ತದೆ.<br><br>ಸಿಎಲ್-7 (ಬೋರ್ಡಿಂಗ್ & ಲಾಡ್ಜಿಂಗ್ ಸನ್ನದು) ಸನ್ನದನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3(7) ಮತ್ತು 5 ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ತಿಳಿಸಿರುವ ಆಕ್ಷೇಪಣಾರ್ಹ ಸ್ಥಳಗಳನ್ನು ಪರಿಶೀಲಿಸಿ ಹೊಸದಾಗಿ ಸಿಎಲ್-7 ಸನ್ನದನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಸನ್ನದನ್ನು ತೆರೆಯಲು ಅನುಮತಿ ನೀಡಲಾಗಿರುವುದಿಲ್ಲ. ಅಬಕಾರಿ ಕಾಯ್ದೆ ಹಾಗೂ ನಿಯಮಗಳ ವಿರುದ್ಧ ನಿಯಮ ಬಾಹಿರವಾಗಿ ಸನ್ನದು ನಡೆಸಲು ಅನುಮತಿ ನೀಡುವ ಅಧಿಕಾರಿ / ನೌಕರರುಗಳ ವಿರುದ್ಧ ಸೂಕ್ತ ಶಿಸ್ತುಕ್ರಮ ಜರುಗಿಸಲಾಗುತ್ತದೆ.<br><br>ಮದ್ಯದಂಗಡಿಗಳಿಗೆ ಪರವಾನಗಿ ನೀಡುವ ಸಂಬಂಧ ಭ್ರಷ್ಟಾಚಾರ ಮಾಡುತ್ತಿರುವ ಅಧಿಕಾರಿ / ನೌಕರರುಗಳ ವಿವರಗಳನ್ನು ಹಾಗೂ ಸದರಿಯವರ ವಿರುದ್ಧ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಕಳೆದ 10 ವರ್ಷಗಳಿಂದ ಇಲ್ಲಿಯವರೆಗೂ ಕೋಲಾರ, ಬೆಂಗಳೂರನ್ನು ಒಳಗೊಂಡಂತೆ ರಾಜ್ಯಾದ್ಯಂತ ಎಷ್ಟು ಸಿ.ಎಲ್-7 ಪರವಾನಗಿಯನ್ನು ನೀಡಲಾಗಿದೆ. ಸಿ.ಎಲ್-7 ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ನಿಯಮದಂತೆ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆಯಬೇಕು. ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು | ಕಳೆದ 10 ವರ್ಷಗಳಿಂದ ಇಲ್ಲಿಯವರೆಗೆ ಅಂದರೆ 2014-15ನೇ ಅಬಕಾರಿ ಸಾಲಿನಿಂದ 2024-25ನೇ ಸಾಲಿನ ನವೆಂಬರ್-2024ರ ಅಂತ್ಯದವರೆಗೆ ಮಂಜೂರು ಮಾಡಿರುವ ಸನ್ನದುಗಳ ಮಾಹಿತಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br><br>ಸಿಎಲ್-7 ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆಯಬೇಕು. ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕೆಂದು ಅಬಕಾರಿ ನಿಯಮಗಳಲ್ಲಿ ಉಲ್ಲೇಖಿಸಿರುವುದಿಲ್ಲ. |

ನಮೂನೆ 6A ಮತ್ತು ನಮೂನೆ-7 ರಲ್ಲಿ ಮಂಜೂರು ಮಾಡಲಾಗಿರುವ ಹೊಸ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿದ್ದುಪಡಿತರಲಾಗಿರುತ್ತದೆ.

ಮುಂದುವರೆದು, ರಾಜಸ್ವ ಹಿತದೃಷ್ಠಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ.

ಸಿಎಲ್-7 ಸನ್ನದು ಮಂಜೂರು ಮಾಡಲು ಬೃಹತ್/ ಮಹಾನಗರ ಪಾಲಿಕೆಗಳಲ್ಲಿ 15 ಡಬಲ್ ರೂಂ ಹಾಗೂ ಇತರೆ ಪ್ರದೇಶದಲ್ಲಿ 10 ಡಬಲ್ ರೂಂ ಗಳನ್ನು ಕಟ್ಟಡದಲ್ಲಿ ಹೊಂದಿರಬೇಕು.

ಅಬಕಾರಿ ಸನ್ನದು ಮಂಜೂರಾತಿ/ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಹೊಂದಿರಬೇಕಾಗುತ್ತದೆ.

ಈ ಮೂಲ ಸೌಕರ್ಯಗಳ ಪೈಕಿ ಸಿಎಲ್-7 ಸನ್ನದಿನ ಕಟ್ಟಡದಲ್ಲಿ ಎರಡು ಹಾಸಿಗೆಗಳಿರುವ (Double Bedded) ಹಾಗೂ ಶೌಚಾಲಯದ ವ್ಯವಸ್ಥೆಯಿರುವ ಕೊಠಡಿಗಳ ಬಗ್ಗೆ ಹಾಗೂ ಸನ್ನದಿನ ಆವರಣದಲ್ಲಿ ವಾಹನಗಳ ನಿಲುಗಡೆಗಾಗಿ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ.

ಸನ್ನದು ಮಂಜೂರಾತಿ ಸಂಬಂಧ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಪೂರ್ವದಲ್ಲಿಯೇ ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಿರುವ ಎಲ್ಲಾ ವಿವರಗಳ ಬಗ್ಗೆ ವಿಚಾರಣೆ ಮಾಡುವ ವಿವೇಚನಾಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿದ್ದು, ಸನ್ನದನ್ನು ನೀಡುವ ಸಂಬಂಧ ಯಾವುದೇ ಆಕ್ಷೇಪಣೆಗಳು ಇಲ್ಲದಿರುವ ಬಗ್ಗೆ ಮನದಟ್ಟು ಮಾಡಿಕೊಂಡ ನಂತರವೇ ಸನ್ನದು ಮಂಜೂರಾತಿಗೆ ಪೂರ್ವಾನುಮತಿಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳೇ ಉಳ್ಳವರಾಗಿರುತ್ತಾರೆ. ಸದರಿಯವರ ಅಂತಹ ಶಿಫಾರಸ್ಸನ್ನು ಪರಿಗಣಿಸಿ, ಸನ್ನದು ಮಂಜೂರಾತಿಗೆ ಪೂರ್ವಾನುಮತಿ ನೀಡುವ ಅಧಿಕಾರವು ಅಬಕಾರಿ ಆಯುಕ್ತರಿಗೆ ದತ್ತವಾಗಿದ್ದು, ಪೂರ್ವಾನುಮತಿ ದೊರೆತ ನಂತರದಲ್ಲಿ ಸನ್ನದನ್ನು ಮಂಜೂರು ಮಾಡುವ ವಿವೇಚನಾಧಿಕಾರವು ಸಹ ಜಿಲ್ಲಾಧಿಕಾರಿಗಳಿಗೆ ಪ್ರದತ್ತವಾಗಿರುತ್ತದೆ.

| | | |
|---|---|---|
| | ಹೊಂದಿರಬೇಕೆಂಬುವುದು ಕಡ್ಡಾಯವೇ; | ಸುತ್ತೋಲೆ ಸಂಖ್ಯೆ:ಇಸಿಐ/01/ ಅ.ಅ.ಆ (ಭಾ.ತ.ಮ) / 2020-21, ದಿನಾಂಕ:01-12-2020ರಲ್ಲಿ ಸಿಎಲ್-7 ಸನ್ನದು ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸೂಚನೆಯನ್ನು ನೀಡಲಾಗಿದೆ. ಸದರಿ ಸುತ್ತೋಲೆಯಲ್ಲಿ 1)ಉದ್ದೇಶಿತ ಸನ್ನದು ಕಟ್ಟಡವು ಸಂಬಂಧಪಟ್ಟ ಪ್ರಾಧಿಕಾರದಿಂದ ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆದಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು 2) ಉದ್ದೇಶಿತ ಸನ್ನದು ಕಟ್ಟಡದಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು 3) ಉದ್ದೇಶಿತ ಸನ್ನದು ಕಟ್ಟಡದಲ್ಲಿ ಅಗ್ನಿ ಶಾಮಕ ಸೌಲಭ್ಯವನ್ನು ಒದಗಿಸಲಾಗಿದೆಯೇ ಎಂಬ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಎಂದು ತಿಳಿಸಲಾಗಿರುತ್ತದೆ.<br><br>ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಅಬಕಾರಿ ಆಯುಕ್ತರ ಕಛೇರಿಗೆ ಹೊಸದಾಗಿ ಸನ್ನದು ಮಂಜೂರಾತಿ ಸಂಬಂಧ ಪೂರ್ವಾನುಮತಿ ಕೋರಿ ಸಲ್ಲಿಸುತ್ತಿರುವ ಪ್ರಸ್ತಾವನೆಗಳಲ್ಲಿ ಭೂಪರಿವರ್ತನೆ ವಿಷಯಕ್ಕೆ ಸಂಬಂಧಿಸಿದಂತೆ, ಕೆಲವು ಜಿಲ್ಲೆಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗಳಲ್ಲಿ ಭೂಪರಿವರ್ತನೆ ಆಗಿದ್ದಲ್ಲಿ ಮಾತ್ರ, ಸನ್ನದು ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ ಮತ್ತು ಕೆಲವು ಜಿಲ್ಲೆಗಳಲ್ಲಿ ಭೂಪರಿವರ್ತನೆ ಆಗದಿದ್ದರೂ ಸಹ ಸನ್ನದು ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ.<br><br>ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಿಎಲ್-7 ಸನ್ನದು ಮಂಜೂರು ಮಾಡಲಾಗುತ್ತಿದೆ.<br><br>ಗ್ರಾಹಕರ ಸುರಕ್ಷತೆ ಹಿತದೃಷ್ಟಿಯಿಂದ ಸಿಎಲ್-7 ಸನ್ನದು ಮಂಜೂರು ಮಾಡುವ ಪೂರ್ವದಲ್ಲಿ ಎಲ್ಲಾ ಮೂಲಭೂತ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವ ಹಿನ್ನಲೆಯಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕಾಗಿರುತ್ತದೆ. ಈ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಸುತ್ತೋಲೆ ಮೂಲಕ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಅಗತ್ಯ ಸೂಚನೆಯನ್ನು ನೀಡಲಾಗಿದೆ. |

| | | |
|---|---|---|
| ಇ) | ಹಾಗಿದ್ದಲ್ಲಿ ನಿಯಮದ ರೀತ್ಯಾ ನಡೆಯುತ್ತಿರುವ ಹಾಗೂ ನಿಯಮ ಉಲ್ಲಂಘಿಸಿರುವ ಮತ್ತು ಪರವಾನಗಿಯನ್ನು ಪಡೆಯದೇ ವಾಮ ಮಾರ್ಗದಿಂದ ವ್ಯಾಪಾರ ನಡೆಸುತ್ತಿರುವವರ ಕುರಿತು ಸರ್ಕಾರ ಕೈಗೊಂಡ ಕ್ರಮವೇನು? | ಹೊಸದಾಗಿ ಮಂಜೂರು ಮಾಡಿದ ಹಾಗೂ ವಾರ್ಷಿಕ ನವೀಕರಣಗೊಂಡ ಸಿಎಲ್-7 ಸನ್ನದುಗಳು ಅಬಕಾರಿ ಕಾಯ್ದೆ / ನಿಯಮಗಳಲ್ಲಿ ತಿಳಿಸಲಾಗಿರುವಂತೆ ಹಾಗೂ ಸಿಎಲ್-7 ಸನ್ನದಿಗೆ ನಿರ್ಧಿಷ್ಟಪಡಿಸಿದ ಷರತ್ತುಗಳಂತೆ ಕಾರ್ಯ ನಿರ್ವಹಿಸಬೇಕಿರುತ್ತದೆ.<br><br>ರಾಜ್ಯವ್ಯಾಪಿ ಕಾರ್ಯನಿರ್ವಹಿಸುತ್ತಿರುವ ಸಿಎಲ್-7 ಸನ್ನದುಗಳ ವಿರುದ್ಧ ಸನ್ನದು ಷರತ್ತು ಉಲ್ಲಂಘನೆಗಾಗಿ 2023-24ನೇ ಸಾಲಿನಲ್ಲಿ ಒಟ್ಟು 3980 ಪ್ರಕರಣಗಳನ್ನು ಮತ್ತು 2024-25ನೇ ಸಾಲಿನ ನವೆಂಬರ್-2024ರ ಅಂತ್ಯಕ್ಕೆ 1244 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.<br><br>ಸಿಎಲ್-7 ಸನ್ನದು ಮಂಜೂರಾತಿಯನ್ನು ಪಡೆಯದೇ ಕಳ್ಳಮಾರ್ಗದಿಂದ ಸಿಎಲ್-7 ಸನ್ನದಿನಂತೆ ವ್ಯಾಪಾರ ನಡೆಸುತ್ತಿರುವ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |

**ಆಇ 85 ಇಎಲ್‌ಕ್ಯೂ 2024**

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು

## ಅನುಬಂಧ - 1

## ಮದ್ಯದಂಗಡಿ ಪರವಾನಿಗೆ ಸಂಬಂಧ ಭ್ರಷ್ಟಾಚಾರ ಮಾಡುತ್ತಿರುವ ಅಧಿಕಾರಿ/ನೌಕರರ ವಿವರ

| ಕ್ರ.ಸ | ಅಧಿಕಾರಿ ನೌಕರರ ಹೆಸರು | ಕಡತ ಸಂಖ್ಯೆ ಹಾಗೂ ವಿಷಯ | ಪ್ರಸ್ತುತ ಹಂತ |
|---|---|---|---|
| 1 | ಶ್ರೀ.ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಹಾಲಿ M/s TOIYET Breweries Pvt, Ltd., ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಎಕ್ಸೈಸ್-17011/17/2022, ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣ ಬೇಡಿಕೆ ಇಟ್ಟಿರುವ ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ (ಎ.ಸಿ.ಬಿ). ನಗರ ವಿಭಾಗದ ಮೊಕದ್ದಮೆ ಸಂ: 43/2022, ಕಲಂ-7(a) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.<br><br>ಶ್ರೀ.ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಇವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್-17011/17/2022, ದಿನಾಂಕ:27-05-2022 ರನ್ವಯ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಮೆ. ಎಸ್.ಡಿ.ಯು (ಫ್ರೂಟ್) ವೈನರಿ ಪ್ರೈ., ಲಿ,, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲೆ ವರ್ಗಾಯಿಸಿ ಆದಶಿಸಲಾಗಿರುತ್ತದೆ.<br><br>ಸದರಿಯವರ ಅಮಾನತ್ತು ಆದೇಶವನ್ನು ಈ ಪ್ರಾಧಿಕಾರದ ಆದೇಶ ಸಂ: ಎಕ್ಸೈಸ್-17011/17/2022, ದಿನಾಂಕ: 11-01-2023 ರಂದು ತೆರವುಗೊಳಿಸಿ ಆಪಾದಿತರನ್ನು M/s TOIYET Breweries Pvt, Ltd., ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಗೆ ತೈನಾತಿಸಲಾಗಿರುತ್ತದೆ.<br><br>ಈ ಪ್ರಾಧಿಕಾರದ ಪತ್ರ ಸಂ: ಎಕ್ಸೈಸ್-17011/17/2022, ದಿನಾಂಕ: 13-03-2024 ರಂದು ಶ್ರೀ ಮಂಜುನಾಥ್ ಎಸ್., ಅಬಕಾರಿ ನಿರೀಕ್ಷಕರು, ಅಂದಿನ ಕೆಂಗೇರಿ ವಲಯ- 17 ಕಛೇರಿ, ಬೆಂಗಳೂರು ನಗರ ಜಿಲ್ಲೆ ಬಿಯುಡಿ-3 ಹಾಲಿ ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರ ಕಛೇರಿ, M/s TOIYET Breweries Pvt, Ltd., ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ- 1988 (ತಿದ್ದುಪಡಿ ಕಾಯ್ದೆ 2018) ರ ಕಲಂ.7(a) ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ಆದೇಶವನ್ನು ನೀಡಲಾಗಿರುತ್ತದೆ.<br><br>ಮಾನ್ಯ ಲೋಕಾಯುಕ್ತ ಇವರ ಹಂತದಲ್ಲಿ ಹಾಗೂ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿದೆ. |
| 2 | 1. ಶ್ರೀಮತಿ ಸ್ವಪ್ನ, ಅಂದಿನ ಅಬಕಾರಿ ಉಪ ಆಯುಕ್ತರು ದಾವಣಗೆರೆ ಜಿಲ್ಲೆ.<br>2. ಶ್ರೀ ರವಿ ಮರಿಗೌಡರು, ಅಂದಿನ ಅಬಕಾರಿ ಉಪ ಅಧೀಕ್ಷಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಜಿಲ್ಲೆ ಹಾಲಿ<br>3. ಶ್ರೀಮತಿ ಶೀಲಾ ಜೆ. ಕೆ., | ಸಂಖ್ಯೆ:ಎಕ್ಸೈಸ್-17011/46/2023, ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣ ಬೇಡಿಕೆ ಇಟ್ಟಿರುವವರ ವಿರುದ್ಧ ಇಲಾಖೆಯ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಮೊಕದ್ದಮೆ ಸಂಖ್ಯೆ:16/2023 ದಿನಾಂಕ:13-10-2023 ಕಲಂ-7(a) , 7(ಬಿ), 12 ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ನ್ನು ಮಾನ್ಯ ಲೋಕಾಯುಕ್ತ ಇವರು ದಾಖಲಿಸಿರುತ್ತಾರೆ.<br><br>i) ಶ್ರೀಮತಿ ಸ್ವಪ್ನ, ಅಂದಿನ ಅಬಕಾರಿ ಉಪ ಆಯುಕ್ತರು ದಾವಣಗೆರೆ ಜಿಲ್ಲೆ. ಇವರು ಅಕ್ರಮ ಹಣ ಬೇಡಿಕೆ ಇಟ್ಟಿರುವ ಆರೋಪದಡಿ ದಿನಾಂಕ:15-10-2023 ರಿಂದ 26-11-2023 ರವರೆಗೆ ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಸಕ್ಷಮ ಪ್ರಾಧಿಕಾರಿಗಳಾದ ಸರ್ಕಾರವು ಆದೇಶ ಸಂಖ್ಯೆ:ಆಇ/113/ ಇಪಿಎಸ್/2023, |

| | | | |
|---|---|---|---|
| | ಅಬಕಾರಿ ನಿರೀಕ್ಷಕರು, ಹರಿಹರ ವಲಯ ಹಾಲಿ<br>4. ಶ್ರೀ ಅಶೋಕ, ಅಂದಿನ ಪ್ರಥಮ ದರ್ಜೆ ಸಹಾಯಕರು,ಅಬಕಾರಿ ಉಪ ಆಯುಕ್ತರ ಕಛೇರಿ ದಾವಣಗೆರೆ ಜಿಲ್ಲೆ ಹಾಲಿ ಮೆ. ಐ.ಸಿ.ಪಿ.ಎಲ್. ಸ್ಯಾಮ್‌ಸನ್ಸ್ ಡಿಸ್ಟಿಲರೀಸ್, ದುಗ್ಗಾವತಿ, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ.<br>5. ಶ್ರೀಮತಿ ಶೈಲಶ್ರೀ ಎಂ. ಮಡಿವಾಳರ, ಅಂದಿನ ದ್ವಿತೀಯ ದರ್ಜೆ ಸಹಾಯಕರು ಹಾಲಿ ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯನಗರ ಜಿಲ್ಲೆ. | | ದಿನಾಂಕ:28-11-2023 ರನ್ವಯ ಸೇವೆಯಿಂದ ಅಮಾನತ್ತು ಪಡಿಸಿ ಆದೇಶಿಸಿರುತ್ತಾರೆ. ಸದರಿ ಅಮಾನತ್ತು ಆದೇಶದ ವಿರುದ್ಧ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 5117/2023ನ್ನು ಪ್ರಶ್ನಿಸಿರುತ್ತಾರೆ.<br><br>ಮಾನ್ಯ ನ್ಯಾಯಾಲಯವು ದಿನಾಂಕ:05-04-2024 ಆದೇಶದನ್ವಯ ಸದರಿಯವರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಆಪಾದಿತರು ಸರ್ಕಾರದ ಅಮಾನತ್ತು ಆದೇಶ ಹಾಗೂ ಕೆ.ಎಸ್.ಎ.ಟಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:11085/2024 ದಾಖಲಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23-04-2023 ರ ಮಧ್ಯಂತರ ಆದೇಶದಲ್ಲಿ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ಚಾಲ್ತಿಯಲ್ಲಿದ್ದು ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>ii) ಶ್ರೀ ರವಿ ಮರಿಗೌಡರು, ಅಬಕಾರಿ ಉಪ ಅಧೀಕ್ಷಕರು ಇವರ ವಿರುದ್ಧ ಅಕ್ರಮ ಹಣ ಬೇಡಿಕೆ ಸಂಬಂಧಿಸಿದಂತೆ ಸದರಿಯವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್-17011/46/2023, ದಿನಾಂಕ: 06-12-2023 ರನ್ವಯ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಎಂ.ಪಿ.ಡಿಸ್ಟಿಲರೀಸ್ ಕೋಲಾರ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.<br><br>ಸದರಿ ಆಪಾದಿತರು ಅಬಕಾರಿ ಆಯುಕ್ತರ ಪ್ರಾಧಿಕಾರದ ಆದೇಶವನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:5236/2023, ದಿನಾಂಕ: 18-12-2023 ರನ್ವಯ ಪ್ರಶ್ನಿಸಿದ್ದು ಮಾನ್ಯ ನ್ಯಾಯಾಲಯವು ದಿನಾಂಕ:05-04-2024 ರ ಅಂತಿಮ ಆದೇಶದನ್ವಯ ಆಪಾದಿತರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಅಬಕಾರಿ ಆಯುಕ್ತರ ಅಮಾನತ್ತು ಆದೇಶ ಹಾಗೂ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯ ಅಂತಿಮ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:11483/2024 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಯಾವುದೇ ತಡೆಯಾಜ್ಞೆಯನ್ನು ನೀಡಿರುವುದಿಲ್ಲ. ಸದರಿಯವರ ಅಮಾನತ್ತು ಆದೇಶವನ್ನು ಆದೇಶ ಸಂಖ್ಯೆ:ಎಕ್ಸೈಸ್-17011/46/2023, ದಿನಾಂಕ:11-06-2024 ರನ್ವಯ ಇನ್ನೂ 06 ತಿಂಗಳು ವಿಸ್ತರಿಸಲಾಗಿರುತ್ತದೆ.<br><br>iii)ತದನಂತರ, ಈ ಕಛೇರಿಯ ನಡವಳಿ ಆದೇಶ ಸಂಖ್ಯೆ: ಎಕ್ಸೈಜ್-17011/46/2023, ದಿನಾಂಕ: 04-11-2024 ರಲ್ಲಿ ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರ ಅಮಾನತ್ತನ್ನು ತೆರವುಗೊಳಿಸಿ ಸದರಿಯವರನ್ನು ಎಂ.ಪಿ.ಡಿಸ್ಟಿಲರೀಸ್ ಕೋಲಾರ ಜಿಲ್ಲೆ ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ತೈನಾತಿಸಿ ಆದೇಶಿಸಲಾಗಿರುತ್ತದೆ.<br><br>iv) ಶ್ರೀಮತಿ ಶೀಲಾ ಜಿ. ಕೆ., ಅಬಕಾರಿ ನಿರೀಕ್ಷಕರು ಇವರು ಅಕ್ರಮ ಹಣ ಬೇಡಿಕೆಗೆ ಸಂಬಂಧಿಸಿದಂತೆ ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್-17011/ 46/2023, ದಿನಾಂಕ:03-11-2023 ರನ್ವಯ ಅಮಾನತ್ತುಪಡಿಸಿ ಆದೇಶಗೊಳಿಸಲಾಗಿರುತ್ತದೆ. ಸದರಿಯವರು ಕರ್ನಾಟಕ ರಾಜ್ಯ ಆಡಳಿತ ಮಂಡಳಿಯಲ್ಲಿ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಅರ್ಜಿ ಸಂಖ್ಯೆ:5123/2023 ರನ್ವಯ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ:04-12-2023 ರ ಅಂತಿಮ |

| | | | |
|---|---|---|---|
| | | | ಆದೇಶದಲ್ಲಿ ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಸದರಿ ಆಪಾದಿತರು ಅಮಾನತ್ತು ಆದೇಶವನ್ನು ಹಾಗೂ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿಯ ಅಂತಿಮ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:11505/2024 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23-04-2024 ಮದ್ಯದಂತರ ಆದೇಶಲ್ಲಿ ಅಬಕಾರಿ ಆಯುಕ್ತರ ಪ್ರಾಧಿಕಾರದ ಅಮಾನತ್ತು ಆದೇಶ ಹಾಗೂ ಮಾನ್ಯ ಕರ್ನಾಟಕ ರಾಜ್ಯ ನ್ಯಾಯ ಆಡಳಿತ ಮಂಡಳಿಯ ಅಂತಿಮ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br>v) ಶ್ರೀ ಅಶೋಕ, ಅಂದಿನ ಪ್ರಥಮ ದರ್ಜೆ ಸಹಾಯಕರು, ಇವರನ್ನು ಮಾನ್ಯ ಲೋಕಾಯುಕ್ತ ಅಧಿಕಾರಿಗಳು ಅಕ್ರಮ ಹಣದೊಂದಿಗೆ ಟ್ರ್ಯಾಪ್ ಆಗಿದ್ದು, ಸದರಿಯವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್-17011/43/2023, ದಿನಾಂಕ:03-11-2023 ರನ್ವಯ ಅಮಾನತ್ತುಪಡಿಸಲಾಗಿರುತ್ತದೆ.<br>ಸದರಿಯವರ ಅಮಾನತ್ತನ್ನು ಆದೇಶ: ಎಕ್ಸೈಸ್-17011/46/2023, ದಿನಾಂಕ:09-04-2024 ರಲ್ಲಿ ತೆರವುಗೊಳಿಸಿ ಮೆ. ಐ.ಸಿ.ಪಿ.ಎಲ್. ಸ್ಯಾಮ್‌ಸನ್ಸ್ ಡಿಸ್ಟಿಲರೀಸ್, ದುಗ್ಗಾವತಿ, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ ಇಲ್ಲಿಗೆ ತೈನಾತಿಸಲಾಗಿರುತ್ತದೆ.<br>vi) ಶ್ರೀಮತಿ ಶೈಲಶ್ರೀ ಎಂ. ಮಡಿವಾಳರ, ಅಂದಿನ ದ್ವಿತೀಯ ದರ್ಜೆ ಸಹಾಯಕರು ಇವರ ವಿರುದ್ಧದ ಅಕ್ರಮ ಹಣವನ್ನು ಬೇಡಿಕೆ ಇಟ್ಟಿರುವ ಆರೋಪದಡಿ ಅಬಕಾರಿ ಆಯುಕ್ತರ ಪ್ರಾಧಿಕಾರವು ಸಂಖ್ಯೆ:ಎಕ್ಸೈಸ್-17011/43/2023, ದಿನಾಂಕ:03-11-2023 ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. ಸದರಿಯವರ ಅಮಾನತ್ತನ್ನು ತೆರವುಗೊಳಿಸಿ ಆದೇಶ:ಎಕ್ಸೈಸ್-17011/46/2023, ದಿನಾಂಕ:09-04-2024 ರಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯನಗರ ಜಿಲ್ಲೆ ಇಲ್ಲಿಗೆ ತೈನಾತಿಸಿ ಆದೇಶಿಸಲಾಗಿರುತ್ತದೆ.<br>ಮಾನ್ಯ ಲೋಕಾಯುಕ್ತ ಇವರ ಹಂತದಲ್ಲಿ ಹಾಗೂ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿದೆ. |
| 3 | ಶ್ರೀಮತಿ ಸಿ. ಸೆಲೀನಾ , ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಹಾಲಿ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ. | ಸಂಖ್ಯೆ: ಅಬಕಾರಿ -17011/15/2022 ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡಿರುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಶ್ರೀಮತಿ ಸಿ. ಸೆಲೀನಾ ಸಿ., ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಹಾಲಿ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ ಇವರು ಸಿಎಲ್-7 ಪರವಾನಗಿ ಮಂಜೂರು ಮಾಡಿರುವ ವಿಚಾರದಲ್ಲಿ ಲಂಚದ ಹಣದ ಬೇಡಿಕೆಗೆ ಸಂಬಂಧಿಸಿದಂತೆ ಅಂದಿನ ಎ.ಸಿ.ಬಿ. ಮಾನ್ಯ ಹಾಲಿ ಲೋಕಾಯುಕ್ತ ಪೊಲೀಸ್ ಕೊಪ್ಪಳ ಜಿಲ್ಲೆ ಇವರು ಅಪರಾಧ ಸಂಖ್ಯೆ: 05/2022, ದಿನಾಂಕ:14-05-2022 ಕಲಂ-7(a) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ನ್ನು ದಾಖಲಿಸಿರುತ್ತಾರೆ.<br>ಸದರಿ ಆರೋಪದ ಕುರಿತು ಸರ್ಕಾರದ ಆದೇಶ ಸಂಖ್ಯೆ:ಆಇ/48/ಇಪಿಎಸ್/2022,ಬೆಂಗಳೂರು, ದಿನಾಂಕ:25-05-2022 ರನ್ವಯ ಸದರಿಯವರನ್ನು ಅಮಾನತ್ತು ಪಡಿಸಿ ಅವರ ಲೀನ್‌ನ್ನು ಮೆ. ಜಾನ್ ಡಿಸ್ಟಿಲರೀಸ್ ಪ್ರೈ, ಲಿ., ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುತ್ತದೆ. ಸದರಿ ಅಮಾನತ್ತು ಆದೇಶವನ್ನು ಆಪಾದಿತರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 10667/2022 ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.<br>ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ದಿನಾಂಕ:24-05-2024ರ ಆದೇಶದಲ್ಲಿ ಅಮಾನತ್ತು ಆದೇಶವನ್ನು ವಜಾಗೊಳಿಸಿರುತ್ತದೆ. ಮಾನ್ಯ ಲೋಕಾಯುಕ್ತ ಹಂತದಲ್ಲಿ ತನಿಖೆ ಜಾರಿಯಲ್ಲಿದೆ.<br>ಶ್ರೀಮತಿ ಸಲೀನಾ. ಸಿ, ಅಬಕಾರಿ ಉಪ ಆಯುಕ್ತರು, ಇವರು ದಿನಾಂಕ: 13-07-2024 ರಂದು ಮರಣ |

| | | | |
|---|---|---|---|
| | | | ಹೊಂದಿರುವುದರಿಂದ, ಇವರ ಮೇಲಿನ ಪ್ರಕರಣಗಳಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಆಗಿರುವ ಬಗ್ಗೆ ಉಲ್ಲೇಖಗಳಿಲ್ಲದೇ ಇರುವುದರಿಂದ ಸದರಿಯವರ ವಿರುದ್ಧದ ಮೇಲಿನ ಪ್ರಕರಣಗಳನ್ನು ಮುಕ್ತಾಯಗೊಳಿಸುವ ಬಗ್ಗೆ ಪರಿಶೀಲಿನಯಲ್ಲಿದೆ. |
| 4 | ಶ್ರೀ ಎ. ರವಿಶಂಕರ್, ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ.<br><br>ಶ್ರೀ ಶಿವಶಂಕರ್ ಆರಾಧ್ಯ, ಅಬಕಾರಿ ನಿರೀಕ್ಷಕರು, ಮದ್ದೂರು ವಲಯ. | ಸಂ: ಅಬಕಾರಿ-17011/36/2024.<br><br>ಸಿಎಲ್-7 ಸನ್ನದು ಮಂಜೂರಾತಿಗಾಗಿ ಲಂಚಕ್ಕೆ ಭೇಡಿಕೆ ಇಟ್ಟಿರುವ ಬಗ್ಗೆ ಟಿ.ವಿ. ಮಾಧ್ಯಮಗಳಲ್ಲಿ ಹಾಗ ಯೂ ಟ್ಯೂಬ್ ಚಾನಲ್‌ಗಳಲ್ಲಿ ವರದಿ ಬಿತ್ತರವಾಗಿ ರುವ ಬಗ್ಗೆ. | ದಿನಾಂಕ:28-11-2024 ರಂದು ಕನ್ನಡ ಪಬ್ಲಿಕ್ ಟಿ.ವಿ, ಬಿ. ಟಿ. ವಿ ಹಾಗೂ ಇತರೆ ಟಿ. ವಿ ಮಾಧ್ಯಮಗಳಲ್ಲಿ ಮತ್ತು ಯೂ-ಟ್ಯೂಬ್ ಚಾನಲ್‌ಗಳಲ್ಲಿ " ಮಂಡ್ಯದಲ್ಲಿ ಬಾರ್ ಲೈಸೆನ್ಸ್‌ಗೆ ಲಕ್ಷ-ಲಕ್ಷ ಹಣಕ್ಕೆ ಡಿಮ್ಯಾಂಡ್ ಸ್ಫೋಟಕ ಮಾಹಿತಿ ಬಿಚ್ಚಿಟ್ಟ ಕೈ ಕಾರ್ಯಕರ್ತರು" ಎನ್ನುವ ಶೀರ್ಷಿಕೆಯಡಿಯಲ್ಲಿ ವರದಿ ಬಿತ್ತರವಾಗಿದ್ದು ಶ್ರೀ ಪುನೀತ್ ಎಂಬುವವರು ಮಂಡ್ಯ ಜಿಲ್ಲೆಯ ಅಬಕಾರಿ ಉಪ ಆಯುಕ್ತರಾದ ಶ್ರೀ ಎ. ರವಿಶಂಕರ್ ಮತ್ತು ಮದ್ದೂರು ವಲಯ ಅಬಕಾರಿ ನಿರೀಕ್ಷಕರಾದ ಶಿವಶಂಕರ್ ಆರಾಧ್ಯ ಇವರುಗಳ ವಿರುದ್ಧ ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಆಡಿಯೋ ಮತ್ತು ವಿಡಿಯೋ ಸಮೇತ ಲೋಕಾಯುಕ್ತಕ್ಕೆ ದೂರು ನೀಡಿದ್ದು, ಈ ಸಂಬಂಧ ಟಿ. ವಿ ಮಾಧ್ಯಮಗಳ ಮುಂದೆ ಹಾಜರಾಗಿ ಹೇಳಿಕೆ ನೀಡಿರುತ್ತಾರೆ. ಆದ ಕಾರಣ ಸದರಿ ಅಧಿಕಾರಿಗಳ ವಿರುದ್ಧದ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬಂದಿರುವುದರಿಂದ ಸದರಿ ಅಧಿಕಾರಿಗಳನ್ನು ಈ ಕೆಳಕಂಡಂತೆ ಅಮಾನತ್ತುಗೊಳಿಸಲಾಗಿರುತ್ತದೆ.<br><br>1) ಶ್ರೀ ಎ. ರವಿಶಂಕರ್, ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ ಇವರು ಸಿಎಲ್-7 ಸನ್ನದು ಮಂಜೂರಾತಿಗಾಗಿ ಲಂಚದ ಬೇಡಿಕೆ ಇಟ್ಟಿರುವುದು ಟಿ.ವಿ. ಮಾಧ್ಯಮದಲ್ಲಿ ಬಿತ್ತರಗೊಂಡು ಸರ್ಕಾರಕ್ಕೆ ಮುಜುಗರ ಉಂಟಾಗಿರುತ್ತದೆ. ಈ ಪ್ರಕರಣದಲ್ಲಿ ಆಪಾದಿತರ ವಿರುದ್ಧದ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸದರಿಯವರನ್ನು ದಿನಾಂಕ: 29-11-2024 ರಂದು ಅಮಾನತ್ತುಗೊಳಿಸಿ, ಅವರ ಲೀನ್ ಅನ್ನು ಅಬಕಾರಿ ಉಪ ಆಯುಕ್ತರು, ಬೀದರ್ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿದೆ.<br><br>2) ಶ್ರೀ ಶಿವಶಂಕರ್ ಆರಾಧ್ಯ, ಅಬಕಾರಿ ನಿರೀಕ್ಷಕರು, ಮದ್ದೂರು ವಲಯ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ದಿನಾಂಕ: 28-11-2024 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಅಬಕಾರಿ ಆಯುಕ್ತರು ಆದೇಶಿಸಿದ್ದು, ಅಮಾನತ್ತಿನ ಅವಧಿಯಲ್ಲಿ ಅವರ ಲೀನ್ ಅನ್ನು ಕೆ.ಎಸ್.ಬಿ.ಸಿ.ಎಲ್ ಡಿಪೋ, ಗದಗ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುತ್ತಾ . |

**ಆಇ 85 ಇಎಲ್‌ಕ್ಯೂ 2024**

## ಅನುಬಂಧ-2

### ಕಳೆದ 10 ವರ್ಷಗಳಲ್ಲಿ ಮಂಜೂರು ಮಾಡಿರುವ ಸಿಎಲ್-7 ಸನ್ನದುಗಳ ವಿವರ (ಅಬಕಾರಿ ವರ್ಷ ಜುಲೈನಿಂದ ಜೂನ್ ರವರೆಗೆ)

| ಕ್ರ. ಸಂ. | ಜಿಲ್ಲೆ | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 | 2024-25 (ದಿ:01-07-24 ರಿಂದ ದಿ:30-11-24 ರವರೆಗೆ) | ಒಟ್ಟು |
|---|---|---|---|---|---|---|---|---|---|---|---|---|---|
| 1 | ಬೆಂಗಳೂರು ನಗರ ಜಿಲ್ಲೆ - 1 | 1 | 1 | 2 | 6 | 2 | 8 | 6 | 7 | 20 | 19 | 9 | 81 |
| 2 | ಬೆಂಗಳೂರು ನಗರ ಜಿಲ್ಲೆ - 2 | 0 | 0 | 0 | 0 | 2 | 4 | 11 | 20 | 25 | 28 | 14 | 104 |
| 3 | ಬೆಂಗಳೂರು ನಗರ ಜಿಲ್ಲೆ - 3 | 0 | 0 | 0 | 0 | 3 | 16 | 12 | 25 | 19 | 22 | 12 | 109 |
| 4 | ಬೆಂಗಳೂರು ನಗರ ಜಿಲ್ಲೆ - 4 | 2 | 1 | 1 | 0 | 4 | 1 | 6 | 1 | 2 | 3 | 0 | 21 |
| 5 | ಬೆಂಗಳೂರು ನಗರ ಜಿಲ್ಲೆ - 5 | 1 | 1 | 1 | 0 | 0 | 7 | 0 | 4 | 5 | 8 | 9 | 36 |
| 6 | ಬೆಂಗಳೂರು ನಗರ ಜಿಲ್ಲೆ - 6 | 0 | 1 | 0 | 5 | 4 | 9 | 4 | 16 | 10 | 8 | 1 | 58 |
| 7 | ಬೆಂಗಳೂರು ನಗರ ಜಿಲ್ಲೆ - 7 | 0 | 3 | 1 | 0 | 1 | 3 | 0 | 3 | 8 | 4 | 4 | 27 |
| 8 | ಬೆಂಗಳೂರು ನಗರ ಜಿಲ್ಲೆ - 8 | 0 | 0 | 1 | 1 | 3 | 10 | 13 | 24 | 22 | 25 | 9 | 108 |
| 9 | ಕೋಲಾರ | 1 | 3 | 0 | 4 | 5 | 4 | 10 | 18 | 24 | 21 | 15 | 105 |
| 10 | ಬೆಂಗಳೂರು ಗ್ರಾಮಾಂತರ | 0 | 1 | 1 | 4 | 13 | 11 | 4 | 4 | 9 | 35 | 18 | 100 |
| 11 | ಚಿಕ್ಕಬಳ್ಳಾಪುರ | 0 | 2 | 0 | 0 | 1 | 1 | 2 | 12 | 12 | 16 | 13 | 59 |
| 12 | ರಾಮನಗರ | 0 | 1 | 0 | 0 | 1 | 1 | 2 | 7 | 3 | 11 | 9 | 35 |
| 13 | ತುಮಕೂರು | 1 | 6 | 0 | 3 | 2 | 1 | 11 | 17 | 31 | 17 | 12 | 101 |
| 14 | ಬಾಗಲಕೋಟೆ | 2 | 1 | 0 | 1 | 4 | 2 | 4 | 2 | 8 | 4 | 4 | 32 |
| 15 | ಬೆಳಗಾವಿ ಉತ್ತರ | 6 | 6 | 3 | 7 | 6 | 3 | 2 | 5 | 6 | 5 | 0 | 49 |
| 16 | ಬೆಳಗಾವಿ ದಕ್ಷಿಣ | 2 | 3 | 2 | 2 | 3 | 4 | 2 | 2 | 6 | 4 | 1 | 31 |
| 17 | ವಿಜಯಪುರ | 1 | 1 | 2 | 2 | 6 | 3 | 5 | 2 | 2 | 6 | 1 | 31 |
| 18 | ಧಾರವಾಡ | 2 | 3 | 3 | 5 | 2 | 1 | 2 | 3 | 1 | 3 | 0 | 25 |
| 19 | ಚಿಕ್ಕಮಗಳೂರು | 2 | 1 | 0 | 7 | 7 | 2 | 7 | 4 | 2 | 6 | 5 | 43 |
| 20 | ದಾವಣಗೆರೆ | 1 | 0 | 1 | 1 | 4 | 2 | 0 | 0 | 0 | 2 | 1 | 12 |
| 21 | ಹಾವೇರಿ | 3 | 4 | 0 | 2 | 2 | 2 | 3 | 2 | 3 | 2 | 1 | 24 |
| 22 | ಶಿವಮೊಗ್ಗ | 1 | 1 | 0 | 0 | 7 | 7 | 7 | 2 | 19 | 10 | 3 | 57 |
| 23 | ಬಳ್ಳಾರಿ | 1 | 2 | 2 | 3 | 0 | 1 | 1 | 2 | 6 | 0 | 1 | 19 |
| 24 | ವಿಜಯನಗರ | 1 | 1 | 0 | 0 | 3 | 0 | 0 | 0 | 4 | 2 | 2 | 13 |
| 25 | ಚಿತ್ರದುರ್ಗ | 0 | 1 | 0 | 2 | 3 | 2 | 0 | 5 | 1 | 1 | 4 | 19 |
| 26 | ಗದಗ | 1 | 5 | 2 | 1 | 4 | 5 | 2 | 3 | 5 | 2 | 2 | 32 |
| 27 | ಕೊಪ್ಪಳ | 3 | 2 | 1 | 1 | 5 | 6 | 3 | 4 | 7 | 3 | 0 | 35 |
| 28 | ಬೀದರ್ | 2 | 3 | 0 | 5 | 6 | 3 | 2 | 5 | 8 | 4 | 2 | 40 |
| 29 | ಕಲಬುರಗಿ | 3 | 1 | 2 | 3 | 10 | 14 | 1 | 10 | 4 | 8 | 0 | 56 |
| 30 | ರಾಯಚೂರು | 0 | 2 | 0 | 1 | 5 | 4 | 8 | 4 | 8 | 7 | 1 | 40 |
| 31 | ಯಾದಗಿರಿ | 2 | 1 | 0 | 1 | 3 | 2 | 3 | 2 | 1 | 3 | 0 | 18 |
| 32 | ದಕ್ಷಿಣ ಕನ್ನಡ | 4 | 8 | 2 | 4 | 8 | 10 | 11 | 6 | 10 | 20 | 3 | 86 |
| 33 | ಕೊಡಗು | 4 | 2 | 0 | 0 | 2 | 1 | 1 | 4 | 6 | 4 | 3 | 27 |
| 34 | ಉಡುಪಿ | 5 | 7 | 2 | 7 | 8 | 2 | 15 | 5 | 11 | 4 | 5 | 71 |
| 35 | ಉತ್ತರ ಕನ್ನಡ | 2 | 0 | 0 | 2 | 3 | 1 | 2 | 3 | 6 | 2 | 1 | 22 |
| 36 | ಚಾಮರಾಜನಗರ | 1 | 1 | 0 | 0 | 1 | 2 | 1 | 4 | 2 | 5 | 1 | 18 |
| 37 | ಹಾಸನ | 1 | 5 | 11 | 3 | 0 | 22 | 33 | 62 | 57 | 16 | 12 | 222 |
| 38 | ಮಂಡ್ಯ | 2 | 1 | 4 | 2 | 5 | 7 | 9 | 11 | 18 | 15 | 3 | 77 |
| 39 | ಮೈಸೂರು ನಗರ | 2 | 1 | 2 | 3 | 2 | 5 | 6 | 11 | 7 | 6 | 2 | 47 |
| 40 | ಮೈಸೂರು ಗ್ರಾಮಾಂತರ | 1 | 5 | 3 | 8 | 7 | 8 | 3 | 18 | 9 | 20 | 9 | 91 |
| | ರಾಜ್ಯದ ಒಟ್ಟು | 61 | 88 | 49 | 96 | 157 | 197 | 214 | 339 | 407 | 381 | 192 | 2181 |